ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 27-03-2025**

ಪಾಟೀ ಸವಾಲು : ಪ್ರತಿವಾದಿ ಪರಃ ಶ್ರೀ ಎಸ್ ಕೆ ಎನ್ ವಕೀಲರಿಂದಃ

ನಾನು ಕಳೆದ 11 ವರ್ಷಗಳಿಂದ ಉಪ್ಪಿನ ಅಂಗಡಿಯಲ್ಲಿ ವಾಸ ಇದ್ದೇನೆ. ನನ್ನ ತಾಯಿಯ ಮನೆ ಕಾರ್ಕಳ ತಾಲೂಕು, ಈದು ಗ್ರಾಮವಾಗಿರುತ್ತದೆ. ವ್ಯಾಜ್ಯದ ಆಸ್ತಿ ಖಾಲಿ ಜಾಗ. ವ್ಯಾಜ್ಯದ ಆಸ್ತಿಯ ದಕ್ಷಿಣದಲ್ಲಿ ಪ್ರತಿವಾದಿಯ ಸರ್ವೇ ನಂಬರ್ 221/1 ಸಿ ಆಸ್ತಿ ಇದೆ ಎಂದರೆ ಸರಿ. ವ್ಯಾಜ್ಯದ ಆಸ್ತಿ ನಾನು ಕ್ರಯವರಿಸುವ ಮೊದಲು ಸತೀಶ್ ಪೂಜಾರಿಯವರಿಗೆ ಸೇರಿತ್ತು. ವ್ಯಾಜ್ಯದ ಆಸ್ತಿಯ ಉತ್ತರಕ್ಕೆ ಸರ್ವೇ ನಂಬರ್ 221/1 ಬಿ2 ಸ್ತಿರಾಸ್ತಿ ಇದೆ. ಅದು ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿಲ್ಲ. ನಮ್ಮ ಜಾಗದ ಉತ್ತರಕ್ಕೆ ಇರುವ ಸಿರಾಸ್ತಿಯಲ್ಲಿ ಜಿಲ್ಲಾ ಪಂಚಾಯತ್ ರಸ್ತೆ ಹಾದುಹೋಗುತ್ತದೆ. ಸದರಿ ರಸ್ತೆ ಹಾದುಹೋಗುವ ಜಾಗ ಸರ್ಕಾರಿ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ ಎ ಅನುಸೂಚಿ ಆಸ್ತಿಗೆ ಶಾಶ್ವತ ಗೋಡೆ, ಆವರಣ ಹಾಕಿರುವುದಿಲ್ಲ. ದಾವಾ ಆಸ್ತಿಯನ್ನು 2014 ರಲ್ಲಿ ಖರೀದಿ ಮಾಡಿರುತ್ತೇನೆ. ಅದಕ್ಕಿಂತ ಪೂರ್ವದಲ್ಲಿ ದಾವಾ ಆಸ್ತಿಯ ಪಕ್ಕದಲ್ಲಿ ನಾನು ವಾಸ್ತವ್ಯ ಇದ್ದೆ. ನನ್ನ ಮನೆ ಮತ್ತು ಜಾಗ ದಾವಾ ಆಸ್ತಿಯಿಂದ ಒಂದೂವರೆ ಕಿ ಮೀ ದೂರ ಇದೆ. ದಾವಾ ಆಸ್ತಿಯ ಸುತ್ತ ಮುತ್ತಲಿನಲ್ಲಿ ನನಗೆ ಅಥವಾ ನನ್ನ ತಾಯಿ ಮನೆಯವರಿಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ. 2009 ರಲ್ಲಿ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರಲಿಲ್ಲ. ದಿಃ 18-12-2009 ಕ್ಕೆ ಸತೀಶ್ ಪೂಜಾರಿಯವರಿಗೆ ಮಾತ್ರ ದಾವಾ ಆಸ್ತಿಯಲ್ಲಿ ಹಕ್ಕು ಇತ್ತು ಎಂದರೆ ಸರಿ. ದಾವಾ ಆಸ್ತಿಯ ಪೂರ್ವ ಬದಿಯಲ್ಲಿ ಮಣ್ಣಿನ ರಸ್ತೆ ಇದೆ ಎಂದರೆ ಸರಿಯಲ್ಲ ತೋಡು ಇದೆ. ತೋಡು ಯಾವ ಸರ್ವೇ

ನಂಬರ್ ನಲ್ಲಿ ಬರುತ್ತದೆ ಎಂದು ಗೊತ್ತಿರುವುದಿಲ್ಲ. ಸದರಿ ತೋಡಿನ ಜಾಗ ಸರ್ಕಾರಕ್ಕೆ ಸೇರಿರಬಹುದು.

ಪ್ರತಿವಾದಿ ಸಲ್ಲಿಸಿದ ಲಿಖಿತ ಹೇಳಿಕೆಯನ್ನು ತಿಳಿದುಕೊಂಡಿರುತ್ತೇನೆ. ದಿಃ 18-12-2009 ರಂದು ವ್ಯಾಜ್ಯದ ಆಸ್ತಿಯ ಪೂರ್ವಬದಿಯಲ್ಲಿ 1 ಸೆಂಟ್ಸ ಜಾಗವನ್ನು ಸತೀಶ್ ಪೂಜಾರಿಯವರಿಂದ ರಸ್ತೆ ಉಪಯೋಗಕ್ಕಾಗಿ ಕರಾರು ಮೂಲಕ ಪ್ರತಿವಾದಿ ಪಡೆದುಕೊಂಡ ಬಗ್ಗೆ ಲಿಖಿತ ಹೇಳಿಕೆಯಲ್ಲಿ ಕಾಣಿಸಿದ್ದು ಆ ಬಗ್ಗೆ ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ. ಪ್ರತಿವಾದಿ ಲಿಖಿತ ಹೇಳಿಕೆಯಲ್ಲಿ ಏನೂ ಸಾಧನೆ ಮಾಡುತ್ತಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಪ್ರತಿವಾದಿ ರಸ್ತೆ ಇದೆ ಎಂದು ಸಾಧನೆ ಮಾಡುತ್ತಿದ್ದಾರೆ. ಪ್ರತಿವಾದಿಯವರು ಸತೀಶ್ ಪುಜಾರಿಯವರಿಂದ 1 ಸೆಂಟ್ಸ ಜಾಗವನ್ನು ರಸ್ತೆಗಾಗಿ ಪಡೆದುಕೊಂಡ ಬಗ್ಗೆ ದಾವೆ ದಾಖಲಿಸುವ ಸಮಯದಲ್ಲಿ ನನಗೆ ಗೊತ್ತಿರುವುದಿಲ್ಲ. ದಿಃ 18-12-2009 ರಂದು ಸತೀಶ್ ಪೂಜಾರಿಯವರು 1 ಸೆಂಟ್ಸ ಜಾಗವನ್ನು ಪ್ರತಿವಾದಿಗೆ ರಸ್ತೆಗಾಗಿ ಕೊಟ್ಟಿದ್ದು ಅಂದಿನಿಂದಲೂ ರಸ್ತೆ ಇದೆ ಹಾಗೂ ಸದರಿ ರಸ್ತೆಯನ್ನು ಪ್ರತಿವಾದಿ ಉಪಯೋಗಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಈ ರಸ್ತೆ ಪ್ರತಿವಾದಿಯ ಸ್ಥಿರಾಸ್ತಿಯಿಂದ ದಾವಾ ಆಸ್ತಿಯ ಮೂಲಕ ಸರ್ವೇ ನಂಬರ್ 221/1 ಬಿ2 ರ ಜಿಲ್ಲಾ ಪಂಚಾಯತ್ ರಸ್ತೆಗೆ ಸೇರುತ್ತದೆ ಎಂದರೆ ಸರಿಯಲ್ಲ. ಈ ರಸ್ತೆ ನಾನು ದಾವಾ ಆಸ್ತಿಯನ್ನು ಕ್ರಯವರಿಸುವ ಪೂರ್ವದಿಂದಲೂ ಇತ್ತು ಎಂದರೆ ಸರಿಯಲ್ಲ. 1 ಸೆಂಟ್ಸ ಆಸ್ತಿ ಪಡೆದುಕೊಂಡ ಬಗ್ಗೆ ಪ್ರತಿವಾದಿ ಸತೀಶ್ ಪೂಜಾರಿಯವರಿಗೆ ಪ್ರತಿಫಲ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಪ್ರತಿಫಲ ಕೊಟ್ಟು ರಸ್ತೆಯನ್ನು ಉಪಯೋಗಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಮುಂದುವರಿದು ನಾವು ದಾವಾ ಆಸ್ತಿಯನ್ನು ಖರೀದಿಸಿದ ನಂತರ ರಸ್ತೆ ಮಾಡಿರುತ್ತಾರೆ. ಆ ರಸ್ತೆ ಅಲ್ಲದೇ ಬೇರೆ ಯಾವ ರಸ್ತೆಯೂ ಕೂಡ ಪ್ರತಿವಾದಿ ಜಾಗಕ್ಕೆ ಸಂಪರ್ಕ ಕಲ್ಪಿಸುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಆಸ್ತಿಯ ಪಶ್ಚಿಮಕ್ಕೆ ಬೇರೆ ಪಂಚಾಯತ್

ರಸ್ತೆ ಇದೆ. ದಾವಾ ಆಸ್ತಿಯ ಹಾಗೂ ಪ್ರತಿವಾದಿ ಆಸ್ತಿಯ ನಕ್ಷೆ ಬಗ್ಗೆ ತಿಳಿದುಕೊಂಡಿರುತ್ತೀರಾ ಎಂದರೆ ನಮ್ಮ ಆಸ್ತಿಯ ಬಗ್ಗೆ ತಿಳಿದುಕೊಂಡಿರುತ್ತೇನೆ. ಈಗ ನನಗೆ ತೋರಿಸಿದ ನಕಾಶೆಯಲ್ಲಿ ಕಂಡು ಬರುವ ಸರ್ವೇನಂಬರ್ 221/1 ಬಿ ದಾವಾ ಆಸ್ತಿ ಹಾಗೂ 221/1 ಸಿ ಪ್ರತಿವಾದಿಯ ಆಸ್ತಿ ಎಂದರೆ ಸರಿ. ಸಾಕ್ಷಿಯು ಸದರಿ ನಕ್ಷೆಯನ್ನು ನೋಡಿ ಗುರುತಿಸಿದ ಮೇರೆಗೆ ನಕ್ಷೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ದಾವಾ ಆಸ್ತಿಯ ಪಶ್ಚಿಮದಲ್ಲಿ ಇರುವ ರಸ್ತೆ ಯಾವ ಯಾವ ಸರ್ವೇ ನಂಬರ್ ಗಳಲ್ಲಿ ಹಾದುಹೋಗುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಹೇಳುವಂತಹ ರಸ್ತೆ ಪ್ರತಿವಾದಿಯ ಸ್ಥಿರಾಸ್ತಿಗೆ ಸಂಪರ್ಕ ಕಲ್ಪಿಸುವುದಿಲ್ಲ ಎಂದರೆ ಸರಿಯಲ್ಲ. ಸತೀಶ್ ಪೂಜಾರಿ ಯವರು ದಿಃ 18-12-2009 ರಲ್ಲಿ ದಾವಾ ಆಸ್ತಿಯ ಪೈಕಿ 1 ಸೆಂಟ್ಸ ಜಾಗವನ್ನು ಪ್ರತಿವಾದಿಗೆ ಬಿಟ್ಟುಕೊಟ್ಟ ಪರಿಣಾಮ ನನಗೆ ಆಸ್ತಿಯನ್ನು ಖರೀದಿಗೆ ಕೊಡವ ಮೊದಲೇ ಆ ಒಂದು ಸೆಂಟ್ಸ ಜಾಗದ ಹಕ್ಕನ್ನು ಕಳೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ಸೆಂಟ್ಸ ಆಸ್ತಿಯನ್ನು ಪ್ರತಿವಾದಿಗೆ ಕೊಟ್ಟ ಬಗ್ಗೆ ಸತೀಶ್ ಪುಜಾರಿಯವರನ್ನು ಕೇಳಿರುತ್ತೀರಾ ಎಂದರೆ ಕೇಳಿರುತ್ತೇನೆ ಅದಕ್ಕೆ ಸತೀಶ್ ಪೂಜಾರಿಯವರು ನಾನು ಯಾವುದೇ ಆಸ್ತಿಯನ್ನು ಕೊಟ್ಟಿರುವುದಿಲ್ಲ ಎಂದು ಹೇಳಿರುತ್ತಾರೆ. ಸತೀಶ್ ಪೂಜಾರಿಯವರನ್ನು 2019 ರಲ್ಲಿ ಈ ಬಗ್ಗೆ ಕೇಳಿರುತ್ತೇನೆ. ರಸ್ತೆಯನ್ನು ನಾನು ಬಂದ್ ಮಾಡಲು ಹೋದಾಗ ಅದರ ವಿರುದ್ದ ಪ್ರತಿವಾದಿ ಕಾರ್ಕಳ ಗ್ರಾಮಾಂತರ ಪೋಲಿಸರಿಗೆ ನನ್ನ ಹಾಗೂ ನನ್ನ ಗಂಡನ ವಿರುದ್ದ ಪೋಲಿಸ್ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಮುಂದುವರಿದು ನನ್ನ ಆಸ್ತಿಯನ್ನು ಬಂದ್ ಮಾಡಿರುತ್ತೇವೆ. ಲಿಖಿತವಾದ ಕರಾರು ಪ್ರಕಾರ ದಾವಾ ಆಸ್ತಿಯ 1 ಸೆಂಟ್ಸ ಜಾಗವನ್ನು ಪ್ರತಿವಾದಿಗೆ ಶಾಶ್ವತವಾಗಿ ಮತ್ತು ನಿರಾತಂಕವಾಗಿ ಉಪಯೋಗಿಸುವ ಹಕ್ಕನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವನ್ನು ದಾವಾ ಆಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿಯೇ ಸತೀಶ್ ಪೂಜಾರಿಯವರು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. 1 ಸೆಂಟ್ಸ

ಸ್ವಾಧೀನ ನನಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿ 1 ಸೆಂಟ್ಸ ಆಸ್ತಿಯ ಸ್ವಾಧೀನ ಸತೀಶ್ ಪುಜಾರಿಯವರಿಗೂ ಇರಲಿಲ್ಲ ಎಂದರೆ ಸರಿಯಲ್ಲ. ಪೋಲಿಸ್ ಠಾಣೆಯಲ್ಲಿ ಪ್ರತಿವಾದಿ 1 ಸೆಂಟ್ಸ ಜಾಗ ಬರೆದುಕೊಟ್ಟ ಬಗ್ಗೆ ದಾಖಲೆಯನ್ನು ನಕ್ಷೆಯನ್ನು ಲಗತ್ತಿಸಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ಸೆಂಟ್ಸ ಜಾಗವನ್ನು ರಸ್ತೆಗೆ ಪ್ರತಿವಾದಿಗೆ ಕೊಟ್ಟ ಬಗ್ಗೆ ಸತೀಶ್ ಪುಜಾರಿಯವರು ಆಸ್ತಿ ಖರೀದಿಸುವ ಮುನ್ನ ಹಾಗೂ ಪೋಲಿಸ್ ಠಾಣೆಯಲ್ಲಿ ಪ್ರತಿವಾದಿ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. 2014 ರಲ್ಲಿ ಸತೀಶ್ ಪುಜಾರಿಯವರು ನನಗೆ ಬರೆದುಕೊಟ್ಟ ಕ್ರಯ ಸಾಧನದ ಆಧಾರದ ಮೇಲೆ ನಾನು ಹಕ್ಕು ಸಾಧಿಸುತ್ತಿದ್ದೇನೆ ಎಂದರೆ ಸರಿ. 2014 ರ ಕ್ರಯಪತ್ರದ ಮೂಲಕ ನನಗೆ 1 ಸೆಂಟ್ಸ ಆಸ್ತಿಯ ಹಕ್ಕು ಹಾಗೂ ಸ್ವಾಧೀನ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬಲತ್ಕಾರವಾಗಿ ರಸ್ತೆಯನ್ನು ಮುಚ್ಚಲು ಯತ್ನಿಸಿದ್ದರಿಂದ ಪ್ರತಿವಾದಿ ನನ್ನ ವಿರುದ್ಧ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. 1 ಸೆಂಟ್ಸ ಜಾಗವನ್ನು ಹೊರತು ಪಡಿಸಿ ನನ್ನ ಬೇರೆ ಜಾಗಕ್ಕೆ ಅತೀಕ್ರಮಣ ಹಾಗೂ ಅಡ್ಡಿಯನ್ನು ಪ್ರತಿವಾದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಜಾಗದ ಮಣ್ಣು ತೆಗೆದಿರುತ್ತಾರೆ. ಈ ಬಗ್ಗೆ ವಾದ ಪತ್ರದಲ್ಲಿ ಕಾಣಿಸದೇ ಇರಲು ಏನೂ ಕಾರಣ ಎಂದರೆ ಕಾಣಿಸಿರುತ್ತೇವೆ. ಪ್ರತಿವಾದಿಯವರು ನಮ್ಮ ವಿರುದ್ಧ ನೀಡಿದ ದೂರಿಗೆ ಪ್ರತಿಕಾರವಾಗಿ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯ ಪಶ್ಚಿಮಕ್ಕೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ರಸ್ತೆ ಇದೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಜಿಲ್ಲಾ ಪಂಚಾಯತ್ ರಸ್ತೆಯಿಂದ ದಾವಾ ಎ ಅನುಸೂಚಿ ಆಸ್ತಿಗೆ ಸರ್ವೇ ನಂಬರ್ 221/1 ಬಿ2 ರ ಮೂಲಕ ಸಂಪರ್ಕ ಕಲ್ಪಿಸುವುದು ಎಂದರೆ ಸರಿಯಲ್ಲ. ಜಿಲ್ಲಾ ಪಂಚಾಯತ್ ರಸ್ತೆ ಮತ್ತು ನಮ್ಮ ಆಸ್ತಿಯ ನಡುವೆ ಬೇರೆಯವರ ಆಸ್ತಿ ಇರುವುದಿಲ್ಲ. ಜಿಲ್ಲಾ ಪಂಚಾಯತ್ ರಸ್ತೆ

ಮತ್ತು ನಮ್ಮ ಆಸ್ತಿ ನಡುವೆ 19 ಸೆಂಟ್ಸ ಸರ್ವೇ ನಂಬರ್ 221/1 ಬಿ 2 ಸರ್ಕಾರಿ ಆಸ್ತಿ ಇದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 221/1 ಬಿ 2 ಪೂರ್ವ ಬದಿಯಿಂದ ದಾವಾ ಆಸ್ತಿಯ ಪೂರ್ವ ಬದಿಯ ಮೂಲಕವಾಗಿ ಪ್ರತಿವಾದಿ ಆಸ್ತಿಗೆ ರಸ್ತೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ದಾವಾ ಆಸ್ತಿಯಲ್ಲಿ ಯಾವದೇ ಹೊಸ ರಸ್ತೆಯನ್ನು ಮಾಡಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ಪ್ರತಿವಾದಿ ದಾವಾ ಆಸ್ತಿಯಲ್ಲಿ ಹೊಸದಾಗಿ ರಸ್ತೆ ನಿರ್ಮಾಣ ಮಾಡುತ್ತಿದ್ದಾರೆ ಎಂದು ಸುಳ್ಳು ಪ್ರತಿಪಾದನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ